| Deposition Sheets (RP.No.57) Form No.4 (Civil) |
|---|

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 476/2021**

**..................................................Vs...................................**

ಪಿ.ಡಬ್ಲ್ಯು : 3 ಸಿ.ಡಬ್ಲ್ಯು : 3

ಸಾಕ್ಷಿದಾರಳ ಹೆಸರು : ಸುಲೋಚನ
ಗಂಡನ ಹೆಸರು : ನಾಗರಾಜ ಪೈ
ಪ್ರಾಯ : 45 ವರ್ಷ
ಉದ್ಯೋಗ : ಪ್ರಥಮ ದರ್ಜೆ ಸಹಾಯಕಿ, ತಾಲೂಕು ಕಚೇರಿ
ವಾಸ : ಸಾಣೂರು

ದಿನಾಂಕ 17.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-</u>

ನಾನು 2019 ರಿಂದ 2020 ರವರೆಗೆ ಗ್ರಾಮ ಕರಣಿಕಳಾಗಿ ದುರ್ಗಾ ಗ್ರಾಮ ಪಂಚಾಯತ್ ನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ: 03.08.2020 ರಂದು ಇಂದಿರಾ ಮತ್ತು ಇತರರು ಚಾಸಾ-1 ರವರಿಗೆ ಆರೋಪಿಯು ಸರಕಾರಿ ಜಾಗದಲ್ಲಿ ಮಲೆಕುಡಿಯ ರಸ್ತೆಯನ್ನು ಬಂದ್ ಮಾಡಿರುತ್ತಾರೆ ಎಂದು ದೂರು ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಗ್ರಾಮ ಕರಣಿಕರಾಗಿದ್ದೆ. ನಾನು ಆರೋಪಿಗೆ ನೋಟಿಸು ನೀಡಿರುತ್ತೇನೆ, ಆದರೆ ಅವರು ಹಾಜರಾಗಿರುವುದಿಲ್ಲ. ಆದರೆ ಅರ್ಜಿದಾರರು ಹಾಜರಿದ್ದರು ಅವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ನಂತರ ಚಾಸಾ-1 ರವರಿಗೆ ವರದಿಯನ್ನು ನೀಡಿರುತ್ತೇನೆ. ಈಗ ನಾನು ನೋಡಿದ ದಾಖಲೆಗಳಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ಹೇಳಿಕೆಯಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಇನ್ನೊಂದು ದಾಖಲೆ ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ತಕ್ಷೀರು ಸ್ಥಳದಮಹಜರು ಆಗಿದ್ದು ಈಗಾಗಲೇ ಅದನ್ನು ನಿಪಿ-14 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ತಕ್ಷೀರು ಸ್ಥಳ ಮಹಜರು ಮಾಡುವ ಸಮಯದಲ್ಲಿ ಚಾಸಾ-2 ಮತ್ತು 4 ಸ್ಥಳದಲ್ಲಿ ಇದ್ದರು. ಸದ್ರಿ ಮಹಜರನ್ನು 11.30 ರಿಂದ 12.15 ರವರಗೆ ಮಾಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಬಿ ಎಂ ಎಸ್ ವಕೀಲರಿಂದಃ

ನಾವು ಭೇಟಿ ಕೊಟ್ಟಿದ್ದೇವೆ ಎಂದು ಹೇಳುವ ಸ್ಥಳ ಬೆದ್ರಲ್ಕೆ , ಕುರ್ಪಜೆ ಗೆ ತಾಗಿ ಮಲೆಬೆಟ್ಟಿಗೆ ಹೋಗುವ ರಸ್ತೆ ಎಂದರೆ ಸರಿ. ತಕ್ಷೀರು ನಡೆದಿದೆ ಎಂದು ಹೇಳುವ ಸ್ಥಳದ ಸುತ್ತ ಮುತ್ತ ಸುಮಾರು ವಾಸದ ಮನೆಗಳು ಇವೆ. ಅದು 5 ಸೆಂಟ್ಸ್ ಕಾಲೋನಿ. ಆ ಸಮಯದಲ್ಲಿ ಪೊಲೀಸರು ಅಲ್ಲಿನ ನೆರೆಕರೆಯವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ ಮತ್ತು ವಿಚಾರಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ತಕ್ಷೀರು ನಡೆದಿದೆ ಎಂದು ಹೇಳುವ ಸ್ಥಳದಲ್ಲಿ ಅಲ್ಲಿನ ನೆರೆಕರೆಯವರ ಸಮ್ಮುಖದಲ್ಲಿ ಮಹಜರು ಮಾಡಿರುವುದಿಲ್ಲ. ತಕ್ಷೀರು ನಡೆದಿದೆ ಎಂದು ಹೇಳುವ ಸ್ಥಳ ಸುಮಾರು 482.14.25 ಎಕ್ರೆ ಜಾಗ ಆಗಿರುತ್ತದೆ. ಅಲ್ಲಿ ಯಾವ ಜಾಗ ಖಾಸಗಿ ಜಾಗ ಮತ್ತು ಯಾವ ಜಾಗ ಸರಕಾರಿ ಜಾಗ ಎಂದು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ ಯಾಕೆಂದರೆ ಅದು ಪೋಡಿಯಾಗಿರುವುದಿಲ್ಲ. ನಾನು ನೀಡಿದ್ದೇನೆ ಎಂದು ಹೇಳುವ ವರದಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾನು ತಕ್ಷೀರು ನಡೆದಿದೆ ಎಂದು ಹೇಳುವ ಸ್ಥಳಕ್ಕೆ ಹೋಗಿರುವುದಿಲ್ಲ, ನನ್ನ ಸಮಕ್ಷಮ ಪೊಲೀಸರು ಮಹಜರು ತಾಯಾರಿಸಿರುವುದಿಲ್ಲ ಅದಕ್ಕೆ ನಾನು ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷ್ಯಕ್ಕೂ ಆರೋಪಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಸಹಿಗಳನ್ನು ನನ್ನ

ಕಚೇರಿಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಕಾಣಿಸಿದ ವ್ಯಕ್ತಿಗಳ ವಾಸ್ತವ್ಯದ ವಿಳಾಸ ಕಾಣಿಸಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ